**International Journal of Academic Research**
P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-3(2), Jul-Sep-2025
This work is licensed under a Creative Commons Attribution 4.0 International License [CC BY 4.0]

# ಶಿಕ್ಷಣದ ಮೂಲಕ ಮಹಿಳಾ ಸಬಲೀಕರಣ – ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ಮಮತ. ಎನ್.**
ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ಸಖರಾಯಪಟ್ಟಣ.

**ಸಾರಲೇಖ:**

ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕವಾಗಿ ಶಕ್ತಿ ಹೆಚ್ಚುವಿಕೆ ಹಾಗೂ ಆತ್ಮವಿಶ್ವಾಸವನ್ನು ಬೆಳೆಸುವುದೇ ವ್ಯಕ್ತಿ ಮತ್ತು ಸಮುದಾಯದ ಸಬಲೀಕರಣವಾಗಿದೆ. ಹಾಗೆಯೇ ಮಹಿಳಾ ಸಬಲೀಕರಣವು ಮಹಿಳೆಯು ಅಧಿಕಾರವನ್ನು ಪಡೆದುಕೊಳ್ಳುವುದು, ಕೇವಲ ಆರ್ಥಿಕ ಸ್ಥಾನವಲ್ಲದೇ ಸಾಮಾಜಿಕ, ರಾಜಕೀಯ, ಮತ್ತು ಸಾಂಸ್ಕೃತಿಕವಾಗಿಯು ಪುರುಷರಿಗೆ ಸಮಾನವಾದ ಸ್ಥಾನವನ್ನು ಪಡೆದುಕೊಳ್ಳವುದು, ಮಹಿಳಾ ದೃಷ್ಟಿಕೋನಗಳನ್ನು ಒಪ್ಪಿಕೊಳ್ಳುವುದು ಮತ್ತು ಶಿಕ್ಷಣ, ಅರಿವು, ಸಾಕ್ಷರತೆ, ಸಮಾಜದಲ್ಲಿ ಸಮಾನ ಸ್ಥಾನಮಾನ, ಉತ್ತಮ ಜೀವನೋಪಾಯ ಮತ್ತು ತರಬೇತಿಯ ಮೂಲಕ ಮಹಿಳೆಯರ ಸ್ಥಾನಮಾನವನ್ನು ಹೆಚ್ಚಿಸುವುದಾಗಿದೆ. ಶಿಕ್ಷಣವು ಮಹಿಳಾ ಸಬಲೀಕರಣದ ಮೈಲಿಗಲ್ಲು ಏಕೆಂದರೆ ಅದು ಮಹಿಳೆಯು ತನ್ನ ಸಾಂಪ್ರದಾಯಿಕ ಪಾತ್ರ ಮತ್ತು ಜೀವನ ವಿಧಾನವನ್ನು ಬದಲಾಯಿಸಲು ಹಾಗೂ ಸವಾಲುಗಳನ್ನು ಎದುರಿಸಲು ಸಹಾಯ ಮಾಡಿಕೊಡುವುದು, ಆದ್ದರಿಂದ ಮಹಿಳಾ ಸಬಲೀಕರಣದಲ್ಲಿ ಶಿಕ್ಷಣವು ಮಹತ್ವಪೂರ್ಣವಾದುದಾಗಿದೆ. ಶಿಕ್ಷಣವು ಸಮಾಜದಲ್ಲಿ ಮಹಿಳೆಯರ ಸ್ಥಾನವನ್ನು ಉತ್ತಮಪಡಿಸುವ ಅತ್ಯಂತ ಶಕ್ತಿಶಾಲಿ ಸಾಧನವಾಗಿದೆ. ಶಿಕ್ಷಣವು ಮಹಿಳಾ ಸಬಲೀಕರಣಕ್ಕೆ ಅಡಿಪಾಯವಾಗಿದ್ದು ಭಾರತದಲ್ಲಿ ಮಹಿಳಾ ಶಿಕ್ಷಣವು ಅತ್ಯಗತ್ಯವಾದುದಾಗಿದೆ. ಶಿಕ್ಷಣವು ಕುಟುಂಬದೊಳಗೆ ಮಹಿಳೆಯ ಸ್ಥಾನಮಾನವನ್ನು ಸುಧಾರಿಸುವುದರೊಂದಿಗೆ ಸಮಾನತೆಯನ್ನು ಹೆಚ್ಚಿಸುವುದು. ಶತಮಾನಗಳ ಹಿಂದೆ ಅನೇಕ ತಾರತಮ್ಯತೆಗಳಿಗೆ ಒಳಗಾಗಿದ್ದ ಮಹಿಳೆ ಇಂದು ಸವಾಲುಗಳನ್ನು ಎದುರಿಸಿ ಶಿಕ್ಷಣ ಪಡೆದು ತನ್ನ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ಪಡೆದುಕೊಂಡಿದ್ದಾಳೆ. ಮಹಿಳೆಗೆ ಶಿಕ್ಷಣ ನೀಡುವುದು ಅಭಿವೃದ್ಧಿಗೆ ಉತ್ತಮ ಔಷದಿಯಾಗಿದೆ. ಪ್ರಸ್ತುತ ನನ್ನ ಈ ಅಧ್ಯಯನವು ಶಿಕ್ಷಣದ ಮೂಲಕ ಮಹಿಳಾ ಸಬಲೀಕರಣ ಒಂದು ಸಮಾಜಶಾಸ್ತ್ರೀಯ ಅಧ್ಯಯನವಾಗಿದೆ.

ಮುಖ್ಯಪದಗಳು: ಶಿಕ್ಷಣ, ಮಹಿಳಾ ಸಬಲೀಕರಣ, ಮಹಿಳಾ ಸ್ಥಾನಮಾನ

**International Journal of Academic Research**
P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-3(2), Jul-Sep-2025
This work is licensed under a Creative Commons Attribution 4.0 International License [CC BY 4.0]

**ಪೀಠಿಕೆ:**

ವಿವೇಕಾನಂದರ ಪ್ರಕಾರ "ಶಿಕ್ಷಣ ಕೊಡುವಂತಹದಲ್ಲ, ಅದು ವ್ಯಕ್ತಿಗಳಲ್ಲೇ ಇರುವುದು. ಅದರ ಅಭಿವೃದ್ಧಿ ಕಾರ್ಯವೇ ಶಿಕ್ಷಣದ ಮೂಲೋದ್ದೇಶವಾಗಿದೆ"

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ, 'ನಹಿಜ್ಞಾನೇನ ಸದೃಶಂ' ಎಂಬ ಸೂಕ್ತಿಯಂತೆ ಜ್ಞಾನಕ್ಕಿಂತ ಮಿಗಿಲಾದುದು ಬೇರೊಂದಿಲ್ಲ ಎಂಬುದು ಅರ್ಥಗರ್ಭಿತ. ಇಂದು ಶಿಕ್ಷಣವು ಮಾನವನ ಆಜನ್ಮ ಸಿದ್ಧ ಹಕ್ಕಾಗಿದೆ. ಶಿಕ್ಷಣವೆಂಬುದು ಎಲ್ಲಾ ಸಮಾಜಗಳ ಮೂಲಭೂತ ಚಟುವಟಿಕೆಗಳಲ್ಲಿ ಒಂದಾಗಿದ್ದು, ಇಂದಿನ ಸಮಾಜದಲ್ಲಿ ವ್ಯಕ್ತಿಗಳ ಸಾಮಾಜಿಕ ಅಂತಸ್ತಿನ ಮಟ್ಟವನ್ನು ಅಳೆಯುವಲ್ಲಿ ಶಿಕ್ಷಣವು ಒಂದು ಪ್ರಮುಖ ಸಾಧನವಾಗಿದೆ. ಇಂದಿನ ಸಮಾಜದಲ್ಲಿ ಶಿಕ್ಷಣವು ವೃತ್ತಿ ಸಂಬಂಧಿತ ಅಗತ್ಯಗಳ ಪೂರೈಕೆಗೆ ಹಾಗೂ ಜನರ ಆಶೋತ್ತರಗಳ ಈಡೇರಿಕೆಗೆ ಸಹಾಯಕವಾಗಿದೆ. ವ್ಯಕ್ತಿಯ ಅಭಿವೃದ್ಧಿಯು ಅವರು ಪಡೆದಿರುವ ಶೈಕ್ಷಣಿಕಾರ್ಹತೆಗಳನ್ನು ಅವಲಂಬಿಸಿರುವುದೇ ಇಂದು ಹೆಚ್ಚಾಗಿದೆ. ಇಂದು ಶಿಕ್ಷಣವು ಅಭಿವೃದ್ಧಿ ಮತ್ತು ಸಾಮಾಜಿಕ ಅಂತಸ್ತಿನ ಸೂಚಕವಾಗಿದೆ.

ಮಹಿಳಾ ಶಿಕ್ಷಣವು ಕ್ರಿ.ಪೂ.300 ರಿಂದ ಸುಮಾರು 2000 ವರ್ಷಗಳವರೆಗೆ ಭಾರತದಲ್ಲಿ ಸ್ತ್ರೀ ಶಿಕ್ಷಣವನ್ನು ಅಲಕ್ಷಿಸುತ್ತಲೇ ಹೋಗಲಾಯಿತು. ಮೇಲ್ವರ್ಗಗಳ ಮನೆಯ ಹೆಣ್ಣುಮಕ್ಕಳಿಗೆ ಮನೆಯಲ್ಲಿ ಸಿಗುವ ಅಲ್ಪಸ್ವಲ್ಪ ಶಿಕ್ಷಣ ಹಾಗೂ ದೇವದಾಸಿಯರು ಮತ್ತು ನೃತ್ಯಗಾತಿಯರು ಪಡೆದುಕೊಳ್ಳುತ್ತಿದ್ದ ಓದು ಬರಹವನ್ನು ಬಿಟ್ಟರೆ ಸಾಮಾನ್ಯ ಸ್ತ್ರೀಯರಿಗೆ ಶಿಕ್ಷಣದ ಗಂಧವೇ ಇರಲಿಲ್ಲ. ಭಕ್ತಿ ಪಂಥದ ಪ್ರಭಾವದಿಂದ ಕೆಲವು ಮಂದಿ ಸ್ತ್ರೀಯರು ಶಿಕ್ಷಣದತ್ತ ಹಾಗೂ ಧಾರ್ಮಿಕ ಸಾಹಿತ್ಯದತ್ತ ಆಕರ್ಷಿತರಾದರು. ಆದರೆ ಬ್ರಿಟಿಷ್ ಸರ್ಕಾರವು ತನ್ನ ರಾಜ್ಯಾಡಳಿತದ ಅನುಕೂಲಕ್ಕಾಗಿ ಶಿಕ್ಷಣದಲ್ಲಿ ಸ್ವಲ್ಪ ಆಸಕ್ತಿವಹಿಸಿದ್ದರಿಂದ ಮಹಿಳಾ ಶಿಕ್ಷಣದಲ್ಲಿಯೂ ಒಂದಿಷ್ಟು ಪ್ರಗತಿ ಕಾಣಲು ಸಾಧ್ಯವಾಯಿತು.

ಸ್ತ್ರೀ ಶಿಕ್ಷಣದ ಬಗ್ಗೆ ಬ್ರಿಟಿಷರ ಕಾಲದಲ್ಲಿ ಒಂದಿಷ್ಟು ಆರಂಬಿಕ ಪ್ರಯತ್ನಗಳಾದರೂ ಸ್ವಾತಂತ್ರ್ಯ ನಂತರದಲ್ಲಿ ಸಾಕಷ್ಟು ಗಮನಹರಿಸಲಾಯಿತು. ಸ್ವಾತಂತ್ರ್ಯ ನಂತರದಲ್ಲಿ ಸ್ತ್ರೀ ಶಿಕ್ಷಣಕ್ಕೆ ಸ್ವಲ್ಪಮಟ್ಟಿನ ಪ್ರಾಮುಖ್ಯ ದೊರೆತು ಸ್ತ್ರೀ ಸಾಕ್ಷರತಾ ಪ್ರಮಾಣದಲ್ಲಿ ಒಂದಿಷ್ಟು ಏರಿಕೆ ಕಂಡುಬಂದಿದ್ದರೂ ಅದು ಏಕರೂಪದ್ದಾಗಿರಲಿಲ್ಲ. ಕೆಲವು ಪ್ರದೇಶಗಳಲ್ಲಿನ ಹಾಗೂ ಕೆಲವು ಜನವರ್ಗಗಳ ಸ್ತ್ರೀಯರು ಮಾತ್ರ ಶಿಕ್ಷಣದ ಬಗ್ಗೆ ಆಸಕ್ತಿವಹಿಸಿದ್ದರೂ, ಬಹುಸಂಖ್ಯಾತ ಸ್ತ್ರೀಯರು ಅದರಲ್ಲೂ ಗ್ರಾಮೀಣ ಪ್ರದೇಶದ ಹಾಗೂ ದುರ್ಬಲವರ್ಗದ ಸ್ತ್ರೀಯರು ಅನಕ್ಷರಸ್ಥರಾಗಿಯೇ ಉಳಿದಿದ್ದರು. ಕ್ರಿ.ಶ. 1901 ರಲ್ಲಿ ಸ್ತ್ರೀ ಸಾಕ್ಷರತಾ ಪ್ರಮಾಣ ಕೇವಲ 0.6% ಇದ್ದುದು 2011 ರಲ್ಲಿ 65.46% ಕ್ಕೆ ಏರಿದೆ. ಆದರೆ ಮಹಿಳಾ ಸಾಕ್ಷರತೆಯ

**International Journal of Academic Research**
This work is licensed under a Creative Commons Attribution 4.0 International License [CC BY 4.0]
P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-3(2), Jul-Sep-2025

ಜಾಗತಿಕ ಸಂಖ್ಯಾ ಪ್ರಮಾಣಕ್ಕೆ ಹೋಲಿಸಿದರೆ ಇದು ಬಹಳ ಕಡಿಮೆಯಾಗಿದೆ. ಹಾಗೆಯೇ ತಮ್ಮ ಕೆಳಮಟ್ಟದ ಶಿಕ್ಷಣದಿಂದಾಗಿ ಉತ್ತಮ ಆದಾಯ ತರುವಂತಹ ಉದ್ಯೋಗಗಳಿಗೆ ಪ್ರವೇಶಿಸುವುದು ಮಹಿಳೆಯರಿಗೆ ಸವಾಲಾಗಿದೆ.

ಸಬಲೀಕರಣದ ಅರ್ಥ ಅಧಿಕಾರದ ವರ್ಗಾವಣೆ ಅಥವಾ ಮರುಹಂಚಿಕೆಯೇ ಆಗಿದೆ. ಈ ರೀತಿಯ ಹಂಚಿಕೆಯಿಂದಾ ಸಮಾಜದಲ್ಲಿ ಪುರುಷ ಮತ್ತು ಮಹಿಳೆಯರಲ್ಲಿ ಸಮಾನತೆ ಉಂಟಾಗಲು ಸಾಧ್ಯವಾಗುತ್ತದೆ. ಹಲವಾರು ಬಗೆಯ ಅನರ್ಹತೆಗಳಿಗೆ, ಅಸಮಾನತೆಗಳಿಗೆ ಹಾಗೂ ಲಿಂಗತಾರತಮ್ಯತೆಗಳಿಗೆ ಬಲಿಯಾಗಿ ದುರ್ಬಲವಾಗಿರುವ ಸ್ತ್ರೀಯರನ್ನು ಪ್ರಬಲಗೊಳಿಸುವುದು, ಆರ್ಥಿಕ, ರಾಜಕೀಯ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕವಾಗಿ ಸಶಕ್ತರಾಗಲು ಹಮ್ಮಿಕೊಳ್ಳಲಾಗಿರುವ ಅಭಿವೃದ್ಧಾತ್ಮಕ ಕಾರ್ಯಯೋಜನೆಗಳ ಪ್ರಕ್ರಿಯೆಯನ್ನು ಮಹಿಳಾ ಸಬಲೀಕರಣ ಪ್ರಕ್ರಿಯೆ ಎನ್ನಬಹುದು. ಸಬಲೀಕರಣ, ಸಶಕ್ತತೆ ಎನ್ನುವುದು ಸಾಮಾನ್ಯವಾಗಿ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಯಿಸಿ, ಅವರ ಸಾಮರ್ಥ್ಯವನ್ನು ಹೆಚ್ಚಿಸುವುದೇ ಆಗಿರುತ್ತದೆ. ಸಬಲೀಕರಣ, ಸಶಕ್ತತೆ ಎಂದರೆ ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದುವುದು, ಮಾಹಿತಿ ಮತ್ತು ಸಂಪನ್ಮೂಲಗಳ ಬಗ್ಗೆ ತಿಳಿದುಕೊಳ್ಳುವ ಹಾಗೂ ಅವುಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದುವುದು, ಅವರ ಇಚ್ಛೆಗೆ ಅನುಸಾರವಾಗಿ ಆಯ್ಕೆಮಾಡುವ ಸಾಮರ್ಥ್ಯವನ್ನು ಹೊಂದುವುದು, ಬದಲಾವಣೆಯನ್ನು ಮಾಡುವುದರಲ್ಲಿ ಧನಾತ್ಮಕ ಭರವಸೆಯನ್ನು ಬೆಳೆಸಿಕೊಳ್ಳುವುದು, ಸ್ವಯಂ ಮತ್ತು ಗುಂಪು ಪ್ರಾಬಲ್ಯವನ್ನು ಹೆಚ್ಚಿಸಲು ವಿವಿಧ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವುದು, ಪ್ರಜಾಪ್ರಭುತ್ವದ ಮಾರ್ಗದಲ್ಲಿ ಇತರರ ಗ್ರಹಿಕಾ ಶಕ್ತಿಯನ್ನು ಬದಲಾಯಿಸುವಂತೆ ಮಾಡುವುದು, ಸ್ವಯಂ ಪ್ರೇರೇಪಿತರಾಗಿ ನಿರಂತರ ಬದಲಾವಣೆಯ ಬೆಳವಣಿಗೆ ಪ್ರಕ್ರಿಯೆಯಲ್ಲಿ ಭಾಗವಹಿಸುವುದು, ಆತ್ಮಭಿಮಾನ ಹೆಚ್ಚು ಮಾಡುಕೊಳ್ಳುವುದರಲ್ಲಿ ತೊಡಗಿಕೊಳ್ಳುವುದು.

ಶಿಕ್ಷಣದಿಂದ ಜ್ಞಾನ, ಆತ್ಮವಿಶ್ವಾಸ, ಸಾಮರ್ಥ್ಯವು ಸಿಗುವುದರಿಂದ ಮಹಿಳೆಯು ತನ್ನ ಹಕ್ಕುಗಳು ಮತ್ತು ಅವಕಾಶಗಳನ್ನು ಪಡೆದು ಸಬಲೀಕರಣ ಹೊಂದಲು ಸಾಧ್ಯವಾಗವುದು. ಶಿಕ್ಷಣ ಎಂಬುದು ಮಹಿಳೆಯ ಸುಸ್ಥಿರಾ ಅಭಿವೃದ್ಧಿಗೆ ಸಹಾಯವಾಗುವುದು. ಶಿಕ್ಷಿತ ಮಹಿಳೆಯು ಸಾಮಾಜಿಕ, ಆರ್ಥಿಕ ಅವಕಾಶಗಳನ್ನು ಪಡೆದು ತಾನು ಅಭಿವೃದ್ಧಿ ಹೊಂದುವುದರೊಂದಿಗೆ ಕುಟುಂಬ ಮತ್ತು ದೇಶವನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತದೆ. ಶಿಕ್ಷಿತ ಮಹಿಳೆಯು ಸಮಾಜದ ಮೇಲೆ ಸಕಾರತ್ಮಕ ಪ್ರಭಾವ ಉಂಟು ಮಾಡಲು ಸಾಧ್ಯವಾಗುವುದು. ದೇಶದ ಆರ್ಥಿಕತೆಗೂ ಕೊಡುಗೆಯನ್ನು ನೀಡಬಲ್ಲಳು. ಮಹಿಳೆಯರಿಗೆ ಶಿಕ್ಷಣ ನೀಡುವುದರಿಂದ ಜನಸಂಖ್ಯೆಯ ನಿಯಂತ್ರಣಕ್ಕೆ ಕೂಡ ಸಹಕಾರಿಯಾಗುತ್ತದೆ.

**International Journal of Academic Research**
This work is licensed under a Creative Commons Attribution 4.0 International License [CC BY 4.0]
P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-3(2), Jul-Sep-2025

ಶಿಕ್ಷಣ ಪಡೆದ ಮಹಿಳೆಯು ಚಿಕ್ಕವಯಸ್ಸಿನಲ್ಲಿ ವಿವಾಹವಾಗುವುದು, ಮಕ್ಕಳನ್ನು ಪಡೆಯುವುದನ್ನು ಇಚ್ಚಿಸುವುದಿಲ್ಲ. ಯಾವುದೇ ಸಮಾಜದ ಬೆಳವಣಿಗೆಗೆ ಬಹುಮುಖ್ಯ ಕೊಡುಗೆಯನ್ನು ನೀಡುವುದು ಮಹಿಳೆಯಾಗಿರುತ್ತಾಳೆ. ಇಂದಿನ ಮಕ್ಕಳೇ ನಾಳಿನ ದೇಶದ ಸತ್ಪ್ರಜೆಗಳಾಗಿರುತ್ತಾರೆ. ತನ್ನ ಮಕ್ಕಳಿಗೆ ಉತ್ತಮ ಸಂಸ್ಕೃತಿ ನಡವಳಿಕೆಯನ್ನು ಕಲಿಸಿಕೊಡುವುದು ಶಿಕ್ಷಣ ಪಡೆದ ಮಹಿಳೆಯಾಗಿರುತ್ತಾಳೆ. ಕುಟುಂಬ ಮತ್ತು ಸಮಾಜವನ್ನು ಸುಸಂಸ್ಕೃತವಾಗಿರುಸುವುದಕ್ಕೆ ಸಹಾಯಕವಾಗಿರುತ್ತಾಳೆ.

ಮಹಿಳೆಯು ಶಿಕ್ಷಣ, ಸಾಮಾಜಿಕ, ಆರ್ಥಿಕ, ತಾರತಮ್ಯತೆಗಳಿಗೆ ಒಳಗಾಗಿದ್ದು, ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಸಮಾನತೆ ಪಡೆದುಕೊಳ್ಳುವಲ್ಲಿ ಸಾಕಷ್ಟು ಸವಾಲುಗಳನ್ನು ಹಿಂದಿನಿಂದಲೂ ಎದುರಿಸುತ್ತಾ ಬಂದಿದ್ದಾಳೆ. ಸವಾಲುಗಳನ್ನು ಎದುರಿಸುತ್ತಾ ತನ್ನ ಸ್ಥಾನಮಾನವನ್ನು ಸುಧಾರಿಸಿಕೊಂಡಿದ್ದಾಳೆ. ಆದಾಗ್ಯೂ ಮಹಿಳೆಯ ಸ್ಥಾನಮಾನದ ಸುಧಾರಣೆಯಲ್ಲಿ ಹಾಗೂ ಮಹಿಳಾ ಸಬಲೀಕರಣದಲ್ಲಿ ಶಿಕ್ಷಣವು ಬಹುಮುಖ್ಯ ಪಾತ್ರವನ್ನು ವಹಿಸಿದೆ.

**ಅಧ್ಯಯನದ ಉದ್ದೇಶಗಳು:–**

1. ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ತಿಳಿಯುವುದು.
2. ಮಹಿಳಾ ಸಬಲೀಕರಣದಲ್ಲಿ ಶಿಕ್ಷಣದ ಪಾತ್ರವನ್ನು ತಿಳಿಯುವುದು.
3. ಮಹಿಳಾ ಶಿಕ್ಷಣದ ಸವಾಲುಗಳನ್ನು ತಿಳಿಯುವುದು

**ಅಧ್ಯಯನ ವಿಧಾನ;–**

'ಮಹಿಳಾ ಸಬಲೀಕರಣ ಮತ್ತು ಶಿಕ್ಷಣ' ಕುರಿತಾದ ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆಗಾಗಿ ಅನುಷಂಗಿಕ ಮಾಹಿತಿಯ ಮೂಲವನ್ನು ಬಳಸಲಾಗಿದೆ. ಅನುಷಂಗಿಕ ಮಾಹಿತಿಯ ಮೂಲಗಳಾದ ಸಂಶೋಧನಾ ಗ್ರಂಥಗಳು, ದಿನಪತ್ರಿಕೆಗಳು, ಪ್ರೌಢಪ್ರಬಂಧಗಳು, ಅಂತಾರ್ಜಾಲ ಮುಂತಾದ ಮೂಲಗಳಿಂದ ಅಗತ್ಯ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

**ಮಹಿಳಾ ಶಿಕ್ಷಣದ ಸವಾಲುಗಳು;–**

1. ಭಾರತೀಯರಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣಕ್ಕಿಂತ ಗೃಹಕೃತ್ಯ, ವಿವಾಹಕ್ಕೆ ಹೆಚ್ಚಿನ ಆದ್ಯತೆ ನೀಡುವ ಸಾಂಪ್ರದಾಯಿಕ ಭಾವನೆ.
2. ಆರ್ಥಿಕ ಅಭಾವದಿಂದ ಕುಟುಂಬವು ಮಗ ಅಥವಾ ಮಗಳಿಗೆ ಶಿಕ್ಷಣ ನೀಡಬೇಕೆಂದರೆ ಗಂಡು ಮಗುವಿಗೆ ಶಿಕ್ಷಣ ನೀಡಲು ಆದ್ಯತೆ ನೀಡುವುದು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರ ಬಗ್ಗೆ

**International Journal of Academic Research**
This work is licensed under a Creative Commons Attribution 4.0 International License [CC BY 4.0]
P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-3(2), Jul-Sep-2025

ಪೋಷಕರಲ್ಲಿ ಇರುವ ಇಂತಹ ನಕಾರತ್ಮಕ ಧೋರಣೆಯು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗುವುದು.

3. ಭಾರತದಲ್ಲಿ ಶಿಕ್ಷಣಕ್ಕೆ ಮತ್ತೊಂದು ಸವಾಲೆಂದರೆ ಶಾಲಾ ಸೌಲಭ್ಯಗಳ ಕೊರತೆ, ತರಗತಿ ಕೊಠಡಿಗಳ ಸಮಸ್ಯೆ, ನೈರ್ಮಲ್ಯ ಸೌಲಭ್ಯಗಳ ಕೊರತೆ ಇದರಿಂದ ಹೆಣ್ಣುಮಕ್ಕಳ ಶಾಲಾ ಹಾಜರಾತಿಗೆ ಹಾನಿಕಾರಕವಾಗಿರುವುದು.
4. ಮಹಿಳಾ ಶಿಕ್ಷಕರು ಹೆಚ್ಚು ಇದ್ದಾಗ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹವು ಉಂಟಾಗುವುದು, ಆದರೆ ಮಹಿಳಾ ಶಿಕ್ಷಕರ ಕೊರತೆ ಇರುವುದು ಮಹಿಳಾ ಶಿಕ್ಷಣಕ್ಕೆ ಸವಾಲಾಗಿದೆ.
5. ಉನ್ನತ ಶಿಕ್ಷಣದಲ್ಲಿ ಲಿಂಗ ಅಂತರವು ಕಂಡುಬರುವುದು.
6. ಮಹಿಳಾ ಶಿಕ್ಷಣದ ಬಗ್ಗೆ ಇರುವ ತಾತ್ಸಾರ ಮನೋಭಾವನೆಗಳು.
7. ಮಹಿಳಾ ದೌರ್ಜನ್ಯ.
8. ಲಿಂಗತಾರತಮ್ಯತೆ, ಇಂದಿಗೂ ಗಂಡು ಮಕ್ಕಳಿಗೆ ಇರುವ ಶೈಕ್ಷಣಿಕ ಆದ್ಯತೆ ಹೆಣ್ಣು ಮಕ್ಕಳಿಗೆ ಇಲ್ಲದಿರುವುದು.
9. ಶಿಕ್ಷಣವು ವಿವಿಧ ಕೌಶಲ್ಯಗಳನ್ನು ಬೆಳೆಸುವಲ್ಲಿ ಸಹಕರಿಸುವಂತಿರಬೇಕು ಆದರೆ ನಮ್ಮ ಶಿಕ್ಷಣದ ಪಠ್ಯಕ್ರಮ ಏಕರೀತಿಯಲ್ಲಿರುವುದು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸವಾಲಾಗಿದೆ.
10. ಹೆಣ್ಣು ಶಿಶುಹತ್ಯೆ ಮತ್ತು ಹೆಣ್ಣು ಭ್ರೂಣಹತ್ಯೆ.

**ಸಲಹೆಗಳು:–**

1. ಮಹಿಳೆಯರ ಸ್ಥಾನಮಾನವನ್ನು ಸುಧಾರಣೆ ಮಾಡುವುದು.
2. ಮಹಿಳೆಯರ ಶೈಕ್ಷಣಿಕ ಅವಕಾಶಗಳನ್ನು ಕಡಿತ ಮಾಡದಂತೆ ಕಾಪಾಡುವುದು.
3. ಮಹಿಳೆಯರಿಗೆ ಉತ್ತಮ ಶಿಕ್ಷಣವನ್ನು ನೀಡುವುದರ ಮೂಲಕ ಸಬಲೀಕರಣಗೊಳಿಸುವುದು.
4. ಮಹಿಳೆಯರಿಗೆ ಜೀವನದ ಮೂಲಭೂತ ಸೌಲಭ್ಯಗಳನ್ನು ಗಂಡು ಮಕ್ಕಳಿಗೆ ನೀಡಿರುವಂತೆ ಹೆಣ್ಣಮಕ್ಕಳಿಗೂ ನೀಡುವುದು.
5. ಸಮಾಜದಲ್ಲಿ ಇತರ ಪ್ರಜೆಗಳಿಗೆ ದೊರಕಿರುವಂತೆ ಹೆಣ್ಣು ಮಕ್ಕಳಿಗೂ ಉತ್ತಮ ಸ್ಥಾನಮಾನಗಳಿಸಲು ಸಹಕರಿಸುವುದು.
6. ಹೆಣ್ಣು ಮಕ್ಕಳ ಅವಶ್ಯಕತೆ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾದ ಮತ್ತು ಅವರ ಶೈಕ್ಷಣಿಕ ಆಸಕ್ತಿಯಂತೆ ಅರ್ಹ ಮತ್ತು ಬುದ್ಧಿಶಾಲಿ ಶೈಕ್ಷಣಿಕ ಮಾರ್ಗದರ್ಶಕರಿಂದ ಸಲಹೆ ಮತ್ತು ಮಾರ್ಗದರ್ಶನ ನೀಡುವುದು.

**International Journal of Academic Research**
P-ISSN: 2348-7666: Impact Factor: 6.023
This work is licensed under a Creative Commons Attribution 4.0 International License [CC BY 4.0]
Homepage: https://www.ijar.org.in/
Volume-12, Issue-3(2), Jul-Sep-2025

7. ಸಹ ಶಿಕ್ಷಣ ಕಾಲೇಜುಗಳಲ್ಲಿ ಗಂಡು ಮತ್ತು ಹೆಣ್ಣುಮಕ್ಕಳಿಗೂ ಸಮಾನವಾದ ಸಾಮಾಜಿಕ ಕರ್ತವ್ಯ ಮತ್ತು ಸೌಲಭ್ಯವನ್ನು ಹಂಚಿಕೆ ಮಾಡಬೇಕು.
8. ಮಹಿಳಾ ಶಿಕ್ಷಣದ ಬಗ್ಗೆ ಸಾರ್ವಜನಿಕರಲ್ಲಿ ಉತ್ತಮ ಅಭಿಪ್ರಾಯಗಳನ್ನು ಹೊಂದಲು ಸೂಕ್ತ ವ್ಯವಸ್ಥೆಗೊಳಿಸುವುದು.
9. ಉತ್ತಮ ಆರೋಗ್ಯ ಮತ್ತು ಪೌಷ್ಟಿಕತೆಯನ್ನು ಒದಗಿಸಿಕೊಡುವುದು.
10. ಮಾತೃಮರಣದರವನ್ನು ನಿಯಂತ್ರಿಸುವುದು.
11. ಮಹಿಳೆಯರ ಅಭಿವೃದ್ಧಿಗಾಗಿ ಸರ್ಕಾರವು ಉತ್ತಮ ಯೋಜನೆಗಳನ್ನು ರೂಪಿಸುವುದು.
12. ಶಿಕ್ಷಿತ ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿ ಮಾಡುವುದು.
13. ಶಿಕ್ಷಣದಿಂದ ಮಾನವ ಹಕ್ಕುಗಳು ಮತ್ತು ಮಹಿಳಾ ಹಕ್ಕುಗಳ ಬಗ್ಗೆ ಮಹಿಳೆಯರಿಗೆ ಅರಿವು ಮೂಡಿಸುವುದು.
14. ಶಿಕ್ಷಣದಿಂದ ಮಹಿಳೆಯರು ರಾಜಕೀಯ ಭಾಗವಹಿಸುವಿಕೆಯಲ್ಲಿ ಸಮಾನತೆಯನ್ನು ನೀಡುವುದು.

**ಬದಲಾಗುತ್ತಿರುವ ಸ್ಥಿತಿಯಲ್ಲಿ ಮಹಿಳೆಯ ಸ್ಥಾನಮಾನ;–**

ಇತ್ತೀಚೆಗೆ ಭಾರತದಲ್ಲಿ ಮಹಿಳಯರು ಶಿಕ್ಷಣ, ರಾಜಕೀಯ, ಮಾಧ್ಯಮ, ಕಲೆ, ಸಾಂಸ್ಕೃತಿಕ, ಸೇವಾ ವಿಭಾಗಗಳು, ವಿಜ್ಞಾನ ಮತ್ತು ತಾಂತ್ರಿಕ ಇತ್ಯಾದಿ ಕ್ಷೇತ್ರಗಳಲ್ಲಿ ಭಾಗವಹಿಸುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಬಗ್ಗೆ ಗಮನಹರಿಸತೊಡಗಿವೆ. ಭಾರತೀಯ ಸಂವಿಧಾನವು ಮಹಿಳೆಯರೆಲ್ಲರಿಗೂ ಸಮಾನತೆ 9 ಅನುಚ್ಛೇದ 14) ರಾಜ್ಯದಿಂದ ತಾರತಮ್ಯವಿರಕೂಡದು (ಅನುಚ್ಛೇದ 39) ಸಮಾನ ಅವಕಾಶ (ಅನುಚ್ಛೇದ 39ಡಿ) ಇತ್ಯಾದಿಗಳನ್ನು ಖಾತ್ರಿಗೊಳಿಸಿದೆ. ಇಷ್ಟಲ್ಲದೆ ರಾಜ್ಯಗಳು ಮಹಿಳೆಯರು ಮತ್ತು ಮಕ್ಕಳ ಪರವಾಗಿ ಹಲವು ಸವಲತ್ತುಗಳನ್ನು ಒದಗಿಸಿದೆ. (ಅನುಚ್ಛೇದ 15(3) ಮಹಿಳೆಯರಿಗೆ ಸೂಕ್ತವಾದ ಮತ್ತು ಮಾನವೀಯತೆಯಿಂದ ಕೂಡಿದ ಕೆಲಸದ ವಾತಾವರಣ ಮತ್ತು ಮಾತೃತ್ವದ ಸವಲತ್ತುಗಳನ್ನು, ಭದ್ರತೆ ನೀಡುವಂತಹ ಅವಕಾಶಗಳನ್ನು ಕಲ್ಪಿಸಿದೆ. (ಅನುಚ್ಛೇದ 42). ಭಾರತದಲ್ಲಿ 1970 ರಿಂದಾ ಸ್ತ್ರೀವಾದದ ಬೆಳವಣಿಗೆಯು ಉಂಟಾಯಿತು. ಸ್ತ್ರೀವಾದಿಗಳು ಮಹಿಳೆಯರ ಕುರಿತು ಇರುವ ವಿವಾದಗಳಾದ ಹೆಣ್ಣುಮಗುವಿನ ಭ್ರೂಣಹತ್ಯೆ, ಲಿಂಗಭೇದ, ಮಹಿಳೆಯರ ಆರೋಗ್ಯ ಮತ್ತು ಸಾಕ್ಷರತೆಗಾಗಿ ಒಗ್ಗಟ್ಟಾಗಿ ಕೆಲಸಮಾಡಿದರು. ಭಾರತದಲ್ಲಿ ಕುಡಿತವು ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಕಾರಣವಾಗಿರುವುದರಿಂದ ಮಹಿಳಾ ಗುಂಪುಗಳು ಕುಡಿತದ ವಿರುದ್ಧ ಆಂದೋಲನಗಳನ್ನು ಆರಂಭಿಸಿದವು, ವರದಕ್ಷಿಣೆ ವಿರುದ್ಧ, ಮಹಿಳಾ ಆತ್ಯಾಚಾರದ ವಿರುದ್ಧ, ಮಹಿಳಾ ಹಕ್ಕುಗಳಿಗಾಗಿ

**International Journal of Academic Research**
This work is licensed under a Creative Commons Attribution 4.0 International License [CC BY 4.0]
P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-3(2), Jul-Sep-2025

ಹೋರಾಟಗಳು ಪ್ರಾರಂಭವಾದವು. 1990 ರಲ್ಲಿ ಮಹಿಳಾ ಸ್ಥಾನಮಾನ ಕುರಿತಾಗಿ ಸಂಸ್ಥೆಗಳನ್ನು, ಸ್ವ ಸಹಾಯ ಸಂಘಗಳು, ಸ್ವಯಂ ಉದ್ಯೋಗಿಗಳ ಸಂಘದಂತಹ ಸರ್ಕಾರೇತರ ಸಂಘಟನೆಗಳು ಮಹಿಳೆಯರ ಹಕ್ಕುಗಳ ಬಗ್ಗೆ ಪ್ರಮುಖವಾದ ಪಾತ್ರವನ್ನು ವಹಿಸಿವೆ. ಶಿಕ್ಷಣವು ಮಹಿಳೆಯರಿಗೆ ಇಂದೂ ತಮ್ಮ ಅಭಿವೃದ್ಧಿಯನ್ನು ಸುಧಾರಿಸುವ, ಆಯ್ಕೆಗಳನ್ನು ಮಾಡವ ಅಧಿಕಾರ ನೀಡುವುದು. ಶಿಕ್ಷಣವು ಮಹಿಳೆಯರ ಹಕ್ಕುಗಳ ಬಗ್ಗೆ ಇಂದೂ ಅರಿವು ಮೂಡಿಸುವ ಪ್ರಯತ್ನವನ್ನು ಮಾಡುತ್ತಿದೆ. ಸರ್ಕಾರವು ಮಹಿಳಾ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುತ್ತಾ ಇದೆ.

ಲಿಂಗ ಅನುಪಾತ; 1901–2011

| ಕ್ರಮ ಸಂಖ್ಯೆ | ಜನಗಣತಿ ವರ್ಷ | ಲಿಂಗ ಅನುಪಾತ (1000ಪುರುಷರಿಗೆ/ಮಹಿಳೆಯರು) |
|---|---|---|
| 1 | 1901 | 972 |
| 2 | 1911 | 964 |
| 3 | 1921 | 955 |
| 4 | 1931 | 950 |
| 5 | 1941 | 945 |
| 6 | 1951 | 946 |
| 7 | 1961 | 941 |
| 8 | 1971 | 930 |
| 9 | 1981 | 934 |
| 10 | 1991 | 927 |
| 11 | 2001 | 933 |
| 12 | 2011 | 943 |

**International Journal of Academic Research**
This work is licensed under a Creative Commons Attribution 4.0 International License [CC BY 4.0]
P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-3(2), Jul-Sep-2025

ಒಂದು ನಿರ್ದಿಷ್ಟ ಸಮಯದಲ್ಲಿ ಸಮಾಜದಲ್ಲಿ ಗಂಡು ಮತ್ತು ಹೆಣ್ಣು ನಡುವಿನ ಸಮಾನತೆಯ ಪ್ರಮಾಣವನ್ನು ಅಳೆಯಲು ಒಂದು ಇದು ಪ್ರಮುಖ ಸೂಚಕವಾಗಿದೆ. ಭಾರತವು ಪಿತೃಪ್ರಧಾನ ಸಮಾಜವಾಗಿದೆ, ಅದಕ್ಕಾಗಿಯೇ ಈ ದೇಶದಲ್ಲಿ ಲಿಂಗ ಅನಪಾತವು ಯಾವಾಗಲೂ ಮಹಿಳೆಯರಿಗೆ ಪ್ರತಿಕೂಲವಾಗಿದೆ. ಕೊಟ್ಟಿರುವ ಕೋಷ್ಟಕದಲ್ಲಿ 1901 ರಿಂದ ಸ್ತ್ರೀಯರ ಸಂಖ್ಯೆಯು ಪುರುಷರ ಸಂಖ್ಯೆಯನ್ನು ಮೀರಿಲ್ಲ.

**ಮಹಿಳೆ ಮತ್ತು ಪುರುಷರ ಸಾಕ್ಷರತೆ ಪ್ರಮಾಣ;**

| ಕ್ರಮಸಂಖ್ಯೆ | ಜನಗಣತಿ ವರ್ಷ | ಪುರುಷ ಸಾಕ್ಷರತೆ ಶೇ. | ಮಹಿಳೆಯರ ಸಾಕ್ಷರತೆ ಶೇ. |
|---|---|---|---|
| 1 | 1901 | 9.8 | 0.6 |
| 2 | 1911 | 10.6 | 1.0 |
| 3 | 1921 | 12.2 | 1.8 |
| 4 | 1931 | 15.6 | 2.9 |
| 5 | 1941 | 24.9 | 7.3 |
| 6 | 1951 | 21.16 | 8.86 |
| 7 | 1961 | 40.40 | 15.35 |
| 8 | 1971 | 45.96 | 21.97 |
| 9 | 1981 | 56.38 | 29.76 |
| 10 | 1991 | 64.13 | 39.29 |
| 11 | 2001 | 75.26 | 53.67 |
| 12 | 2011 | 82.14 | 65.46 |

1901 ರಿಂದಾ 2011 ರವರೆಗೆ ಭಾರತದಲ್ಲಿನ ಪುರುಷ ಮತ್ತು ಮಹಿಳೆಯರ ಸಾಕ್ಷರತೆಯ ಪ್ರಮಾಣ. 1901 ರಿಂದಾ 2011 ರವರೆಗೂ ಮಹಿಳಾ ಸಾಕ್ಷರತೆಯ ಪ್ರಮಾಣವು ಪುರುಷ ಸಾಕ್ಷರತೆಗಿಂತ ಕಡಿಮೆ ಇದೆ.

**International Journal of Academic Research** P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-3(2), Jul-Sep-2025
This work is licensed under a Creative Commons Attribution 4.0 International License [CC BY 4.0]

**ಉಪಸಂಹಾರ;–**

ಸಾಮಾಜಿಕ ಅಂತಸ್ತನ್ನು ಎತ್ತರಿಸುವಲ್ಲಿ ಶಿಕ್ಷಣದ ಪಾತ್ರ ಮಹತ್ವಪೂರ್ಣವಾದುದು. ಇದರಿಂದಲೇ ಸಾಮಾಜಿಕ ಚಿಂತಕರು ಮತ್ತು ಸಾಮಾಜಿಕ ಸುಧಾರಕರು ಸ್ತ್ರೀ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. 1970ರ ನಂತರದಲ್ಲಿ ಸ್ತ್ರೀ ಶಿಕ್ಷಣದ ಸಂಬಂಧವಾಗಿ ಭಾರತದಲ್ಲಿ ಬಹಳಷ್ಟು ಸಾಮಾಜಿಕ ಜಾಗೃತಿ ಮೂಡಿದಂತಿದೆ. ಮಹಿಳಾ ಸಬಲೀಕರಣದಲ್ಲಿ ಶಿಕ್ಷಣವೇ ಮೂಲಧಾರವೆಂಬುದನ್ನು ಮನಗಂಡು ಹೊಸ ಹೊಸ ಯೋಜನೆಗಳನ್ನು ಮುಂದಿರಿಸಿ ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಲಿವೆ. ತಮಗೆ ಲಭ್ಯವಾದ ಶೈಕ್ಷಣಿಕ ಅವಕಾಶಗಳ ಉಪಯೋಗ ಪಡೆದ ಅನೇಕ ಹೆಣ್ಣು ಮಕ್ಕಳು ಕಳೆದ ಎರಡು ದಶಕಗಳಿಂದ ಉತ್ತಮ ಶೈಕ್ಷಾಣಿಕಾರ್ಹತೆಯನ್ನು ಹೊಂದಿ ಪ್ರತಿಷ್ಠಿತ ಉದ್ಯೋಗ ಕ್ಷೇತ್ರಗಳಿಗೆ ಪ್ರವೇಶಿಸುವುದರ ಮೂಲಕ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿಯೂ ಸಬಲೀಕರಣವೂಂದುವುದರ ನಿಟ್ಟಿನಲ್ಲಿ ಅನೇಕ ಸವಾಲುಗಳನ್ನು ಎದುರಿಸಿ ಸಾಗುತ್ತಿದ್ದಾಳೆ. ಒಟ್ಟಿನಲ್ಲಿ ಮಹಿಳಾ ಸಬಲೀಕರಣ ಸಾಧ್ಯವಾಗಬೇಕೆಂದರೆ ಪ್ರತಿ ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡುವುದರಿಂದ ಸಾಧ್ಯವಾಗುವುದು. ಮಹಿಳೆಯರ ಸಬಲೀಕರಣದಲ್ಲಿ ಶಿಕ್ಷಣವು ಮಹತ್ತರವಾದ ಮೈಲಿಗಲ್ಲಾಗಿದೆ. ಶಿಕ್ಷಣದಿಂದಾ ಮಹಿಳಾ ಸಬಲೀಕರಣವು ಸಾಧ್ಯವಾಗುವುದು.

**ಆಧಾರಗ್ರಂಥಗಳು;–**

1. ಪ್ರೊ. ಕೆ. ರಘು. 1999, ಭಾರತದಲ್ಲಿ ಶಿಕ್ಷಣ ಮತ್ತು ಸಮಾಜ, ಚೇತನ ಬುಕ್ ಹೌಸ್ ಪ್ರಕಾಶನ, ಮೈಸೂರು.
2. ಡಾ. ವಿಠ್ಠಲರಾವ್, ಟಿ, ಗಾಯಕ್ವಾಡ್, 2009, ಭಾರತೀಯ ಸ್ತ್ರೀ ಜೀವನ, ಪ್ರಕಾಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಚ. ನ. ಶಂಕರ ರಾವ್, 2008, ಸಮಾಜಶಾಸ್ತ್ರ ಸಂಪುಟ – 2, "ಸಮಾಜಶಾಸ್ತ್ರದ ಪ್ರಾಥಮಿಕ ತತ್ವಗಳು" ಜೈ ಭಾರತ್ ಪ್ರಕಾಶನ ಮಂಗಳೂರು.
4. Nadeem Hasnain and Aseem Hasnain, 2022, Indian Society – Themes and social issues, Published by Mcgraw Hill Education (India) Private Limited, Chennai.
5. H. K. Rawat, 2013, contemporary sociology published by Prem Rawat for Rawat Publications, Jaipur.
6. C.N. Shankar Rao 2004, Sociology of Indian Society, Published by S. Chand and Company LTD, New Delhi.

*****